6

# ತಂದೆ ತಾಯಿಗಳಿಗಾಗಿ ದೇವರ ಅತ್ಯುತ್ತಮವಾದ ಯೋಜನೆ

ವಾಕ್ಯಭಾಗ: ಧರ್ಮೋಪದೇಶ ಕಾಂಡ 6:4-9.

ತಂದೆ ತಾಯಿಗಳಾಗಿರುವಂಥದ್ದು, ಈ ದಿನಗಳಲ್ಲಿ ಒಂದು ವಿಶೇಷವಾದ ಸವಾಲಾಗಿರುತ್ತದೆ! ದೇವರ ಸಹಾಯವಿಲ್ಲದೆ ಹೋದರೆ, ಕಾರ್ಯವು ಕಠಿಣವಾಗಿರುತ್ತದೆ. ತಂದೆ ತಾಯಿಗಳು ದೇವರೊಂದಿಗಿನ ಪಾಲಕರಾಗಿ, ಅವರ ಮಕ್ಕಳನ್ನು ದೇವರ ಶಿಷ್ಯರನ್ನಾಗಿ ಮಾಡಬೇಕು.[1]

ಕೆಲವು ವರ್ಷಗಳ ಹಿಂದೆ, ಒಂದು ಗುಂಪಿನ ತಂದೆತಾಯಿಗಳಿಗೆ ಒಂದು ಸವಾಲು ಉಂಟಾಯಿತು: ಒಂದು ಅಕ್ರೈಸ್ತ ಸಮಾಜದಲ್ಲಿ ತಮ್ಮ ಮಕ್ಕಳನ್ನು ಬೆಳೆಸುವ ವಿಷಯದಲ್ಲಿ ಸವಾಲು ಉಂಟಾಯಿತು. "ವಾಗ್ದಾನದ ದೇಶ" ಎಂಬ ಕಾನಾನಿನ ಗಡಿಯಲ್ಲಿ ಇಸ್ರಾಯೇಲ್ಯರು ಇಳುಕೊಂಡಿದ್ದರು. ಆ ದೇಶದ ಕೆಲವು ವಿಷಯಗಳು ವಾಗ್ದನದಂತೆಯೇ ಇದ್ದವು. ನಿಮ್ಮ ಕುಟುಂಬದೊಂದಿಗೆ ಯಾವುದಾದರು ದೇಶವನ್ನು ಪ್ರವಾಸ ಮಾಡಬೇಕು ಎಂದು ಭಾವಿಸಿದ್ದರೆ, ಕಾನಾನ್ ದೇಶ ಮಾತ್ರ, ನಿಮ್ಮ ಮೊದಲನೆಯ ಆಯ್ಕೆ ಆಗುತ್ತಿರಲಿಲ್ಲ. ಯಾಕೆಂದರೆ ಅದರ ಆಸು ಪಾಸಿನ ದೇಶಗಳು ಕುಲಗೆಟ್ಟ, ವ್ಯಭಿಚಾರದ, ಹಾಗೂ ದೇವ ಭಯವಿಲ್ಲದ ದೇಶಗಳಾಗಿದ್ದವು.

ಮೋಶೆಯು ಜನರ ಗುಂಪನ್ನು ದೃಷ್ಟಿಸುವಾಗ, ಅಲ್ಲಿ ಬಿಗುವಿನ ವಾತಾವರಣ ಉಂಟಾಗಿತ್ತು. ಈಗಾಗಲೇ ಒಂದು ಜನಾಂಗವು ಅರಣ್ಯದಲ್ಲಿ ನಾಶವಾಗಿತ್ತು, ಈ ಕಾರ್ಯ ಪುನರಾವರ್ತನೆಗೊಳ್ಳುವದಕ್ಕೆ ಸಾಧ್ಯವಿತ್ತು. ಆದರೆ ಮೋಶೆ, ಜನರು ಏನನ್ನು ತಿಳಿಯಬೇಕು, ಅವರು ಏನನ್ನು ನಂಬಬೇಕು, ಮತ್ತು ಏನನ್ನು ಮಾಡಬೇಕು ಎಂದು ಅವರೆಲ್ಲರಿಗೆ ಮನವರಿಕೆ ಮಾಡಿದ್ದನು. ಅವನ ಪುನಃ ವಿಮರ್ಶೆಯನ್ನು ಧರ್ಮೋಪದೇಶ ಕಾಂಡದ ಪುಸ್ತಕದಲ್ಲಿ ಕಾಣುತ್ತೇವೆ.[2] ಅವನ ಸಂದೇಶದ ಸಾರಾಂಶವೇನೆಂದರೆ: "ಆ ದೇಶದ ಜನರ ಜೀವನ ಶೈಲಿಯನ್ನು ಅನುಕರಿಸಬೇಡಿರಿ!"

ಧರ್ಮೋಪದೇಶಕಾಂಡ 6:4-9ರಲ್ಲಿ ಅಪ್ಪಣೆಮಾಡುವದಕ್ಕೆ ತಕ್ಕ ಪರಿಸ್ಥಿತಿಯಾಗಿತ್ತು:

> ಇಸ್ರಾಯೇಲ್ಯರೇ, ಕೇಳಿರಿ; ನಮ್ಮ ದೇವರಾದ ಯೆಹೋವನು ಒಬ್ಬನೇ ದೇವರು; ನೀವು ನಿಮ್ಮ ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂದಲೂ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು. ನಾನು ಈಗ ನಿಮಗೆ ತಿಳಿಸುವ ಮಾತುಗಳು ನಿಮ್ಮ ಹೃದಯದಲ್ಲಿರಬೇಕು; ಇವುಗಳನ್ನು ನಿಮ್ಮ ಮಕ್ಕಳಿಗೆ ಅಭ್ಯಾಸಮಾಡಿಸಿ ಮನೆಯಲ್ಲಿ ಕೂತಿರುವಾಗಲೂ ದಾರಿ ನಡೆಯುವಾಗಲೂ ಮಲಗುವಾಗಲೂ ಏಳುವಾಗಲೂ ಇವುಗಳ ವಿಷಯದಲ್ಲಿ ಮಾತಾಡಬೇಕು. ಇವುಗಳನ್ನು ಜ್ಞಾಪಕಾರ್ಥವಾಗಿ ಕೈಗೆ ಕಟ್ಟಿಕೊಳ್ಳಬೇಕು; ಇವು ಹಣೆಗೆ ಕಟ್ಟಿಕೊಳ್ಳುವ ಜ್ಞಾಪಕದ ಪಟ್ಟಿಯಂತೆ ಇರಬೇಕು. ನಿಮ್ಮ ಮನೆ ಬಾಗಲಿನ ನಿಲುವು ಪಟ್ಟಿಗಳಲ್ಲಿಯೂ ತಲೆಬಾಗಲುಗಳ ಮೇಲೆಯೂ ಇವುಗಳನ್ನು ಬರೆಯ ಬೇಕು.

ಯೆಹೂದ ಜನಾಂಗಕ್ಕೆ ಈ ವಾಕ್ಯವು ಬಹು, ಪ್ರಾಮುಖ್ಯವಾದ ವಾಕ್ಯವಾಗಿತ್ತು. ಇಲ್ಲಿ ಪ್ರಾಥಮಿಕವಾದ ವಚನ "ಶೇಮ" 4ನೇ ಪ್ರಥಮ ಪದ *ಶೇಮ,* ಅದರ ಅರ್ಥ ಕೇಳಿರಿ. ಎಂಬುದಾಗಿ ಕಾಲಾಂತರಗಲ್ಲಿ, *ಶೇಮ* ಎಂಬ ಪದವನ್ನು 9ನೇ ವಚನದವರೆಗೆ ವಿಸ್ತರಿಸಲಾಯಿತು, ಕೆಲವು ಸಾರಿ ಇದಕ್ಕೆ ಸಮಂಜಸವಾದ ಆಧಾರ ವಾಕ್ಯಗಳನ್ನು ಸಹ ಸೇರಿಸಲಾಗಿದೆ. ಈ ವಾಕ್ಯಭಾಗವು ಯೆಹೂದ್ಯರಿಗೆ, ಆರಾಧನೆಯ ಕರೆಯಾಗಿತ್ತು, ಯುದ್ಧ ಭೂಮಿಯ ಕೂಗಾಗಿತ್ತು, ಮತ್ತು ಸಾವಿನ ಬಳಿಯ ಪ್ರಾರ್ಥನೆಯಾಗಿತ್ತು. ಇದು ಯೇಹೂದ್ಯರಿಗೆ ಕೇಂದ್ರ ವಾಕ್ಯವಾಗಿತ್ತು. ಇದು ಒಬ್ಬನೇ ದೇವರ ಕುರಿತು ಶಾಸ್ತ್ರೀಯ ಹೇಳಿಕೆಯಾಗಿತ್ತು. ಮತ್ತು ಮನುಷ್ಯನಿಗೂ, ಒಬ್ಬನೆ ದೇವರಿಗೂ ಇದ್ದ ಪರಸ್ಪರ ಸಂಬಂಧದ ಕುರಿತಾಗಿತ್ತು. ಈ ಸಾಮಾನ್ಯ ಜ್ಞಾನವು ಕ್ರೈಸ್ತರಿಗೂ ಅನ್ವಯಿಸುತ್ತದೆ (ಮತ್ತಾಯ 22:36-38).

ಈ ವಾಕ್ಯಭಾಗವನ್ನು ಧ್ಯಾನಿಸುವಾಗ, ಈ ವಾಕ್ಯವು ತಂದೆ ತಾಯಿಗಳಿಗೆ ಸವಾಲಿನ ವಾಕ್ಯವಾಗಿದೆ ಎಂಬುದನ್ನು ಮರೆಯಬಾರದು (ಮತ್ತು ಅಜ್ಜ - ಅಜ್ಜಿಯರಿಗೂ ವಚನ 2) - ಈ ವಾಕ್ಯವು ಪೂರ್ಣ ಯೆಹೂದ್ಯ ಜನಾಂಗಕ್ಕೆ ಸವಾಲಾಗಲಿಲ್ಲ, ಅಥವ ಧಾರ್ಮಿಕ ನಾಯಕರುಗಳಿಗೂ, ಬೋಧಕರಿಗೂ ಸವಾಲಿನ ವಾಕ್ಯವಲ್ಲ. ಮುಂದಿನ ಜನಾಂಗಕ್ಕೆ ಬೋಧನೆ ಮಾಡಲು, *ಕುಟುಂಬವೇ* ಮುಖ್ಯ ವಾಹಿನಿಯಾಗಿರುತ್ತದೆ.

ಈ ಪಠ್ಯ ಕ್ರಮದಲ್ಲಿ, ಮದುವೆಗೂ, ಕುಟುಂಬಕ್ಕೂ ದೇವರು ನೇಮಿಸಿರುವ ಯೋಜನೆಗಳನ್ನು ಒತ್ತಿ ಹೇಳುವವರಾಗಿದ್ದೇವೆ. ಈ ಪಾಠವು ಮತ್ತು ಮುಂದಿನ ಪಾಠವು ತಂದೆ ತಾಯಿಗಳ ಸವಾಲಿನ ಕುರಿತಾಗಿ ಇರುತ್ತದೆ. ಧರ್ಮೋಪದೇಶ ಕಾಂಡವನ್ನು ನೋಡುವಾಗ, ಈ ಪಾಠಕ್ಕೆ ಬುನಾದಿಯನ್ನು ಹಾಕಿಕೊಳ್ಳ ಬಹುದು. 6:4-9, "ತಂದೆ ತಾಯಿಗಳಿಗೆ, ದೇವರ ಅತ್ಯುತ್ತಮವಾದ ಯೋಜನೆ" ಎಂದು ನಾವು ಕರೆಯುತ್ತೇವೆ.[3]

## ಇದನ್ನು ನಂಬಿರಿ (6:4-6)

ತಂದೆ ತಾಯಿಗಳ ಮಕ್ಕಳ ಜವಾಬ್ದಾರಿಯುತ ಕಾರ್ಯಕ್ಕೆ, ದೇವರ ಯೋಜನೆಯು ಆತ್ಮೀಕ ವಾದ ಹೇಳಿಕೆಯಿಂದ ಪ್ರಾರಂಭವಾಗುತ್ತದೆ; ವಿನಃ ದೈಹಿಕವಾದ ಹೇಳಿಕೆಯಿಂದಲ್ಲ: "ನೀವು ನಿಮ್ಮ ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದಲೂ, ಪೂರ್ಣ ಪ್ರಾಣದಿಂದಲೂ, ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು" (ವಚನ 5). ತಂದೆ, ತಾಯಿಗಳು ದೇವರ ಯೋಜನೆ ಯಲ್ಲಿ ಏನಾಗಿರಬೇಕೆಂದು ಪ್ರಾರಂಭವಾಗುತ್ತದೆ: "ಈಗ ನಿಮಗೆ ತಿಳಿಸುವ ಮಾತುಗಳು *ನಿಮ್ಮ* ಹೃದಯದಲ್ಲಿರಬೇಕು" (ವಚನ 6; ಒತ್ತಿ ಹೇಳಿದ್ದು ನನ್ನದು).

*ಒಳ್ಳೆಯ ತಂತ್ರಗಳಿಂದ, ಒಳ್ಳೆಯ ತಂದೆ ತಾಯಿಗಳಾಗುವದು ಎಂಬುದಾಗಿ ಇರುವದಿಲ್ಲ ಆದರೆ ಸರಿಯಾದ ವ್ಯಕ್ತಿಯಾಗಿರುವುದು.* ತಂದೆ ತಾಯಿಗಳ ಹೊಣೆಯ ಬಗ್ಗೆ ನಾನು ಸಂಶೋ ಧನೆ ನಡೆಸುವಾಗ, ಕೆಲವು ಹೇಳಿಕೆಯನ್ನು ಈ ರೀತಿಯಾಗಿ ಬರೆದನು: "ಜೀವನ ಶೈಲಿಯ ಮೂಲಕವಾಗಿ ಒಳ್ಳೆ ತಂದೆ ತಾಯಿಗಳ ಹೊಣೆ ಪ್ರಾರಂಭವಾಗುತ್ತದೆ"; "ನಮಗೆ ಏನಾದರೂ ಆಗದ ಹೊರತು, ನಮ್ಮ ಮೂಲಕ ಯವುದೂ ಆಗುವದಿಲ್ಲ"; "ಒಬ್ಬ ವ್ಯಕ್ತಿ ಒಳ್ಳೆಯ ತಂದೆ ತಾಯಿ ಆಗುವದು ಕಷ್ಟ." "ನಾವು ಯಥಾರ್ಥವಾಗಿದ್ದರೆ" ಪರಿಣಾಮಕಾರಿ ತಂದೆ ತಾಯಿಗಳಾ ಗುತ್ತೇವೆ. ಮತ್ತು ಸತ್ಯವಾದವರಾಗಿರಬೇಕು. ನಾವು ಉತ್ತಮವಾಗಿದ್ದರೆ, ನಮ್ಮ ಮಕ್ಕಳ ಮೇಲೆ ಪ್ರಭಾವ ಬೀರುತ್ತೇವೆ.

ತಂದೆ ತಾಯಿಗಳಿಂದ, ಎರಡು ವಿಷಯಗಳನ್ನು ಬಯಸುತ್ತದೆ. ಎಂದು ನಮ್ಮ ವಾಕ್ಯ ಒತ್ತಿ ಹೇಳುತ್ತದೆ. *ಮೊದಲನೆಯದಾಗಿ* ನಾವು ಸಂಪೂರ್ಣವಾಗಿ ದೇವರನ್ನು ಪ್ರೀತಿಸ ಬೇಕು (ವಚನ 5): ಆತನನ್ನು ಪೂರ್ಣ ಹೃದಯದಿಂದ ಪ್ರೀತಿಸಬೇಕು (ಮನಸ್ಸು ಮತ್ತು ಉದ್ವೇಗ), ಪೂರ್ಣ ಆತ್ಮದಿಂದ (ಜೀವನ ಮತ್ತು ದೇಹ), ಪೂರ್ಣ ಶಕ್ತಿಯಿಂದ (ಬಲ ಮತ್ತು ಕ್ರಿಯೆ). *ಎರಡನೆಯದಾಗಿ,* ನಮ್ಮ ಮಕ್ಕಳಿಗೆ ಬೋಧಿಸಲು, ನಮ್ಮ ಹೃದಯದ "ಒಳಗೆ

ಮತ್ತು ಹೊರಗೆ" ದೇವರ ವಾಕ್ಯವಿರಬೇಕು (ವಚನ 6). KJVತಿಳಿಸುತ್ತದೆ, "ಈ ದಿನ ನಾನು ನಿನಗೆ ಅಪ್ಪಣೆ ಮಾಡಿದ ವಾಕ್ಯಗಳು ನಿನ್ನ ಹೃದಯದಲ್ಲಿರಬೇಕು" (ವಚನ 6). ನಮ್ಮ ಹೃದಯದಲ್ಲಿ ವಾಕ್ಯ ಇರಬೇಕಾದರೆ, ನಾವು ದೇವರ ವಾಕ್ಯವನ್ನು ಓದಲೇ ಬೇಕು, ಧ್ಯಾನಿಸಬೇಕು. ಅಭ್ಯಸಿಸಬೇಕು, ಬಾಯಿ ಪಾಠಮಾಡಬೇಕು. ಅದನ್ನು ನಮ್ಮ ಜೀವನದ ಭಾಗವನ್ನಾಗಿ ಮಾಡಿಕೊಳ್ಳಬೇಕು NASB ಹೇಳುತ್ತದೆ. "ಈ ಪದಗಳನ್ನು ... ನಿಮ್ಮ ಹೃದಯದ ಮೇಲೆ ಇಟ್ಟು ಕೊಳ್ಳಬೇಕು." (ಒತ್ತಿ ಹೇಳಿದ್ದು ನನ್ನದು.) ನಮ್ಮ ಹೃದಯದ ಮೇಲೆ ಅಂದರೆ, ಅದು ಒಂದು ಪ್ರಾಮುಖ್ಯವಾದ ಕಾರ್ಯವೇ ಇರಬೇಕು. ದೇವರ ವಾಕ್ಯದಲ್ಲಿರುವ ನಮ್ಮ ಮನೋಭಾವದ ಕುರಿತು, ನಮ್ಮ ಪುನರಾವರ್ತನೆಯಲ್ಲಿ ಸಾಧ್ಯವಾದಷ್ಟು ನಾವು ಬೋಧಿಸುತ್ತೇವೆ.

## ಇದನ್ನು ಬೋಧಿಸಿರಿ (6:7)

ವಚನ 7 ಪ್ರತಿ ತಂದೆ ತಾಯಿಗಳಿಗೆ ಸವಾಲಿನ ವಾಕ್ಯವಾಗಿರುತ್ತದೆ: "ನಿಮ್ಮ ಮಕ್ಕಳಿಗೆ ಅಭ್ಯಾಸ ಮಾಡಿಸಿ ಮನೆಯಲ್ಲಿ ಕೂತಿರುವಾಗಲೂ, ದಾರಿ ನಡೆಯುವಾಗಲೂ, ಮಲಗುವಾಗಲೂ, ಏಳುವಾಗಲೂ, ಇವುಗಳ ವಿಷಯದಲ್ಲಿ ಮಾತಾಡಬೇಕು."

ದೇವರ ಹಾಗೂ ಆತನ ಮಾರ್ಗಗಳನ್ನು ನಮ್ಮ ಮಕ್ಕಳು ಸ್ವಯಂ ಪ್ರೇರಿತರಾಗಿ ಕಲಿಯುವದು ಅಸಾಧ್ಯ; ಅವರಿಗೆ ಅದು ಬೋಧಿಸಲ್ಪಡಬೇಕು. ಅವರ ಸುತ್ತಲೂ ಇರುವ ಪ್ರಪಂಚದ ಕುರಿತು ಮಕ್ಕಳಿಗೆ ಹೇಳಿಕೊಡಬೇಕು: ಬೆಂಕಿಯುಸುಡುತ್ತದೆ, ಗಾಜೂ ಒಡೆಯುತ್ತದೆ, ಹೂವಿನ ಗಿಡವನ್ನು ಭೂಮಿಯಿಂದ ಎಳೆದು ಹಾಕಿದರೆ ಅದು ಸಾಯುತ್ತದೆ ಎಂದು ಹೇಳಿಕೊಡಬೇಕು. ಮತ್ತು ದೇವರ ಸತ್ಯಗಳನ್ನು ಅವರಿಗೆ ಬೋಧಿಸಬೇಕು.

"ಪರಿಶ್ರಮ"ವನ್ನು ತೆಗೆದುಕೊಂಡು ಮಕ್ಕಳಿಗೆ ಬೋಧಿಸಬೇಕು ಎಂದು ನಮ್ಮ ಪಾಠದಲ್ಲಿ ಹೇಳಲಾಗಿದೆ. ಅದನ್ನು ಅಕ್ಷರಶಃ ತುರ್ಜುಮೆ ಮಾಡಿದರೆ ಅದರ ಅರ್ಥ, "ಮಕ್ಕಳಿಗಾಗಿ ಅವುಗಳನ್ನು ಹರಿತಪಡಿಸಬೇಕು, ದೇವರ ವಾಕ್ಯವನ್ನು ಹರಿತಮಾಡಿ, ಸ್ಪಷ್ಟಪಡಿಸಬೇಕು. ಈ ಸತ್ಯಗಳಿಂದ ಅವರ ಆತ್ಮಗಳು ತುಂಬಿಸಲ್ಪಡಬೇಕು" (ಗಮನಿಸಿರಿ ಇಬ್ರಿಯ 4:12; ಅಪೊಸ್ತಲರಕೃತ್ಯಗಳು 2:37). ಇದನ್ನು ಆಕೆ ಮನಸ್ಸಿನಿಂದ ಇದನ್ನು ಸಾಧಿಸಲು ಅಸಾಧ್ಯ. ನಮ್ಮ ಮಕ್ಕಳ ಮನಸ್ಸನ್ನು ಹಾಗೂ ಹೃದಯವನ್ನು ಬಲವಾಗಿ ಅಪಹರಿಸಲು, ಈ ಲೋಕವು ಪ್ರಯತ್ನಿಸುತ್ತಿದೆ. ಆದುದರಿಂದ ನಾವು ಇನ್ನೂ ಬಲವಾಗಿ ಬೋಧಿಸಬೇಕು.

ನಮ್ಮ ಮಕ್ಕಳ ಸಕಲವಿಧವಾದ ಬೈಬಲ್‌ನ ಜ್ಞಾನವನ್ನು ಪಡೆದುಕೊಳ್ಳುವಂತೆ ಎಲ್ಲಾ ಅವಕಾಶಗಳನ್ನು ಉಪಯೋಗಿಸಿಕೊಳ್ಳಬೇಕು: ಪ್ರತಿ ಧ್ಯಾನದ ಕೂಟಕ್ಕೂ ಅವರನ್ನು ಕರೆತರಬೇಕು. ಅವರನ್ನು ಪ್ರತಿ ಆರಾಧನೆಗೂ, ಯೌವನಸ್ಥರ ಕಾರ್ಯಕ್ರಮಗಳಿಗೂ ಕರೆತರಬೇಕು. ಈ ಅವಕಾಶಗಳನ್ನು ಕೇವಲ ಸಹಾಯಕವಾಗುತ್ತದೆ. ಆದರೆ ವ್ಯಯಕ್ತಿಕ ಬೋಧನೆ ಬಹು ಪ್ರಾಮುಖ್ಯವಾಗಿದೆ.[4] ಪ್ರತಿ ದಿನ, ಕುಟುಂಬದ ಪ್ರಾರ್ಥನೆಯಲ್ಲಿ, ಇದನ್ನು ಮಾಡಬಹುದು. ಮತ್ತು ಕುಟುಂಬದಲ್ಲಿ ವಾರಕ್ಕೆ ಒಂದು ರಾತ್ರಿ ಒಟ್ಟಾಗಿ ಸೇರುವದಕ್ಕೂ, ಸಂತೋಷವಾಗಿರುವದಕ್ಕೂ ಸಮಯವನ್ನು ನಿಗದಿಪಡಿಸಿಕೊಳ್ಳಬೇಕು.[5]

ನಮ್ಮ ಪಾಠದ ಮುಖ್ಯ ಪ್ರಸ್ತಾಪ, ಕೇವಲ ನಿಗದಿತ ಸಮಯದಲ್ಲಿ ಮಾತ್ರ ಬೋಧಿಸದೆ, ಎಲ್ಲಾ ಸಮಯದಲ್ಲಿಯೂ ಬೋಧಿಸಬೇಕು, ಎಂಬುದಾಗಿದೆ ವಚನ 7 ತಿಳಿಸುತ್ತದೆ. "ನಿಮ್ಮ ಮಕ್ಕಳಿಗೆ ಅಭ್ಯಾಸ ... ಮಾಡಿಸಿ ಮನೆಯಲ್ಲಿ ಕೂತಿರುವಾಗಲೂ ದಾರಿ ನಡೆಯುವಾಗಲೂ ಮಲಗುವಾಗಲೂ ಏಳುವಾಗಲೂ ಇವುಗಳ ವಿಷಯದಲ್ಲಿ ಮಾತಾಡಬೇಕು." "ಕೂತುಕೊಳ್ಳುವಾಗಲೂ" ಅಂದರೆ ಇದರಲ್ಲಿ ಊಟದ ಸಮಯವೂ ಸಹ ಸೇರಿರುತ್ತದೆ. (ಊಟದ ಸಮಯದಲ್ಲಿ ಮಕ್ಕಳು ಹಸಿವಿನಿಂದ ಇರುವದರಿಂದ ಆ ಸಮಯದಲ್ಲಿ ಅವರಿಗೆ ಬೋಧಿಸಬೇಕು!)[6]

“ದಾರಿ ನಡೆಯುವಾಗಲೂ” ಎಂದು ಈ ಪಾಠವು ಹೇಳುತ್ತದೆ. ಅ ದಿವಸಗಳಲ್ಲಿ ಕುಟುಂಬಗಳು ಬಹಳವಾಗಿ ನಡೆಯುತ್ತಿದ್ದರು. ಈ ದಿನಗಳಲ್ಲಿಯೂ ಸಹ ಕೆಲವು ಕುಟುಂಬಗಳು ಬಹಳಷ್ಟು ನಡೆಯುತ್ತಾರೆ, ಬೋಧಿಸುವದಕ್ಕೆ ಈ ಸಮಯವು ಸಹ ಸರಿಯಾದ ಸಮಯ ವಾಗಿರುತ್ತದೆ. ನಾವು ನಡೆಯುತ್ತಿರಬಹುದು ಅಥವ ವಾಹನದಲ್ಲಿ ಪ್ರಯಾಣಿಸುತ್ತಿರಬಹುದು. ಪ್ರಯಾಣವು ಕಠಿಣವಾಗಿದ್ದರೂ ಸಹ, ನಂಬಿಕೆಯ ವಿಷಯದಲ್ಲಿ ಮಾತನಾಡಲು ಇದು ತಕ್ಕ ಸಮಯವಾಗಿರುತ್ತದೆ.[7]

“ದಾರಿ ನಡೆಯುವಾಗ” ಎಂಬುದಕ್ಕೆ ಇನ್ನೊಂದು ಮಾತನ್ನು ಸೇರಿಸಲೇಬೇಕು: ರೋಗಿಗಳನ್ನು ಸಂಧಿಸುವಾಗಲೂ, ಆಸ್ಪತ್ರೆಗೆ ಹೋಗುವಾಗಲೂ ಮರಣದ ಮನೆಯಲ್ಲಿ ಸಂತೈಸುವದಕ್ಕೆ ಹೋಗುವಾಗಲೂ, ನಮ್ಮ ಮಕ್ಕಳನ್ನು ಜೊತೆಯಲ್ಲಿ ಕರೆದೊಯ್ಯಬೇಕು. ಈ ಸಮಯದಲ್ಲಿಯೂ ಮಕ್ಕಳಿಗೆ ಬೋಧಿಸಬೇಕು.

“ಮಲಗುವಾಗಲೂ” ಇದು ಮಲಗುವ ಸಮಯವಾಗಿರುತ್ತದೆ. ಮಕ್ಕಳಿಗೆ ಇದು ಬಹು ಅಮೂಲ್ಯಸಮಯವಾಗಿರುತ್ತದೆ. ಈ ಸಮಯದಲ್ಲಿ ಅವರ ಮನಸ್ಸುಗಳು ತೆರೆದಿರುತ್ತದೆ. “ಅದು ಮೃದುವಾದ ಸಮಯವಾಗಿರುತ್ತದೆ.”[8]

“ಏಳುವಾಗಲೂ” ಈ ಸಮಯವೂ ಸಹ ಮಕ್ಕಳಿಗೆ ಬೋಧಿಸಲು, ಉತ್ತಮ ಸಮಯವಾ ಗಿರುತ್ತದೆ. ಮುಂಜಾನೆಯ ಉಪಹಾರದ ಸಮಯವೂ ಸಹ, ದೇವರ ವಾಕ್ಯದಿಂದ ನೂತನ ಪ್ರಾರಂಭಿಸಲು ತಕ್ಕ ಸಮಯವಾಗಿರುತ್ತದೆ.

ಧರ್ಮೋಪದೇಶಕಾಂಡ 6:4-9ರಲ್ಲಿ ಯಾವುದೇ ಸಮಯದಲ್ಲಿಯೂ, ಎಲ್ಲಾ ಸಮಯದಲ್ಲಿಯೂ ಬೋಧಿಸಲು. ತಂದೆ ತಾಯಿಗಳು ಸಿದ್ಧವಾಗಿರಬೇಕು: ನಮ್ಮ ಹೃದಯದಲ್ಲಿರುವ ನಂಬಿಕೆ ಮತ್ತು ಪ್ರೀತಿಯನ್ನು ಮಕ್ಕಳೊಂದಿಗೆ ಹಂಚಿಕೊಳ್ಳುವದಕ್ಕೆ ನಾವು ಎಲ್ಲಾ ಸಮಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. “ಧರ್ಮದ” ವಿಷಯದಲ್ಲಿ “ಕೆಲಸ,” “ಆಟ,” ಇತರ ಮುಂತಾದ ವಿಷಯಗಳಲ್ಲಿ; ನಾವು ಸಂಕುಚಿತ ಮನೋಭಾವವುಳ್ಳವರಾಗಿರಬಾರದು, “ಪ್ರತಿ ದಿವಸದ ಜೀವಿತಕ್ಕೆ ನಮ್ಮ ಬೋಧನೆಗ ಳನ್ನು ಅಳವಡಿಸಿಕೊಳ್ಳಬೇಕು.” ಯಾವುದೇ ಕ್ಷಣವಾಗಿರಲಿ, ಯಾವುದೇ ಕಾರ್ಯವಾ ಗಿರಲೀ, ಯಾವುದೇ ಪರಿಸರವು ಬೋಧಿಸುವದಕ್ಕೆ ಒಳ್ಳೆಯ ಸದಾವಕಾಶವಾಗಿರುತ್ತದೆ: ಅ ಸಮಯದಲ್ಲಿ ಸಮಾಜದಲ್ಲಿ ನಡೆದಿರುವ, ಮರಣ ಜನನ ಅಥವ ಯಾವುದೇ ನಿರ್ಧಾರದ ಬಗ್ಗೆ ಮಾತನಾಡಲು ಕಾಮನ ಬಿಲ್ಲಿನಂತಿರುವ ಮಾತುಗಳನ್ನಾಡಲುಒಳ್ಳೆಯ ಸಮಯವಾ ಗಿರುತ್ತದೆ. ಒಂದು ವೇಳೆ ಕುಟುಂಬವನ್ನು ಪ್ರಾರಂಭಿಸಲು ಇನ್ನೊಂದು ಅವಕಾಶ ದೊರೆತರೆ, ಮಕ್ಕಳಿಗೆ ದೇವರ ಕುರಿತಾಗಿ ಇನ್ನೂ ಆಳವಾಗಿ ಬೋಧಿಸುತ್ತೇನೆ ಎಂದು ಜಾನ್. ಎಮ್. ಡ್ರೆಶ್ಚರ್ ತಿಳಿಸಿದ್ದಾರೆ:

> ಪ್ರತಿ ಸಂಜೆ ಹೇಗೆ ದೇವರು ಬಣ್ಣಗಳನ್ನು ಉಪಯೋಗಿಸಿ, ಹೀಗೆ ಸುಂದರವಾದ ಚಿತ್ರಗಳನ್ನು ಬಿಡಿಸುತ್ತಾನೆ ಎಂದು ನನ್ನ ಮಕ್ಕಳ ಜೊತೆಯಲ್ಲಿ ಅರ್ಧ ತಾಸನ್ನು ಕಳೆ ಯುತ್ತೇನೆ. ಸಾಯಂಕಾಲದ ತೇವದಲ್ಲಿ, ಹೇಗೆ ದೇವರು ಹಸಿರು ಎಲೆಗಳನ್ನು ಹಸು ರಾದ ಮಂಜಿನ ದ್ರವದಲ್ಲಿ ಇರಿಸಿರುತ್ತಾನೆ ಎಂದು ಮಕ್ಕಳೊಂದಿಗೆ ಗಮನಿಸುತ್ತೇನೆ. ಮತ್ತು ಹೇಗೆ ದೇವರು, ರಾತ್ರಿಯನ್ನು ನಕ್ಷತ್ರಗಳಿಂದ ಕಂಗೊಳಿಸುತ್ತಾನೆ, ಮತ್ತು ಹೇಗೆ ಹೊಸ ದಿನಕ್ಕಾಗಿ ರಾತ್ರಿಯನ್ನು ಸಿದ್ಧಪಡಿಸುತ್ತಾನೆ ಎಂದು ಮಕ್ಕಳೊಂದಿಗೆ ಗಮನಿಸು ತ್ತೇನೆ … .
>
> ನಂತರ ನಾವು ಬಣ್ಣ ಬಳಿದಂತೆ ಇರುವ ಬಂಡೆಗಳನ್ನು ನೋಡುತ್ತಾ ನನ್ನ ತಂದೆಯ ಪಕ್ಷಿಗಳ ಸ್ವರವನ್ನು ಕೇಳಿಸಿಕೊಳ್ಳುತ್ತಾ … . ನೀರಿನ ಬಳಿಗೆ ಹೋಗಿ, ನನ್ನ ತಂದೆಯ ಹೂವುಗಳನ್ನು ಕುಯ್ಯುತ್ತೇನೆ, ಹಾಗೂ ನನ್ನ ತಂದೆಯು ಸೃಷ್ಟಿಸಿದ ಸಣ್ಣ

ಹಾಗೂ ದೊಡ್ಡ ಸೃಷ್ಟಿಯನ್ನು ಗಮನಿಸುತ್ತೇನೆ. ... ಬೇಸಿಗೆಯಲ್ಲಿ, ನನ್ನ ಕುಟುಂಬದ ಸಂಗಡ, ಮಲಗುವ ಚೀಲದಲ್ಲಿ ಮಲಗುವದಕ್ಕೆ ಹೆಚ್ಚು ಸಮಯವನ್ನು ತೆಗೆದುಕೊಂಡು, ದೇವರ ಪರಲೋಕ ವನ್ನು ನೋಡುತ್ತಾ, ನಕ್ಷತ್ರಗಳ ಕುರಿತು ಮಾತನಾಡುತ್ತಾ, ಸೃಷ್ಟಿಯ ಶಬ್ದಗಳನ್ನು ಆಲಿಸುತ್ತಾ ಮರಗಳ ಪಿಸುಗುಟ್ಟುವಿಕೆಯನ್ನು, ಕಾಣದೆ ಇರುವ ಕೀಟಗಳ ಸ್ವರವನ್ನು ಕೇಳಿಸಿಕೊಳ್ಳುತ್ತಾ, ನನ್ನ ಮಕ್ಕಳು ಪಡಕೊಂಡಿರುವ ವಸ್ತುಗಳನ್ನು ಹಾಗೂ ಪದಕಗಳನ್ನು ಇಟ್ಟುಕೊಳ್ಳುವದಕ್ಕೆ ಪೆಟ್ಟಿಗೆಗಳನ್ನೂ ಮಾಡಿಕೊಡುತ್ತೇನೆ.[9]

ನಾವು ನಮ್ಮ ಮಕ್ಕಳ ಜೊತೆಯಲ್ಲಿ ಇರುವಾಗ, "ಬೋಧಿಸುವ ಸಮಯಕ್ಕಾಗಿ ಕಾಯುತ್ತಿರಬೇಕು." "ಕಲಿಯುವ ನಿಯಮಗಳು ಅಂದರೆ" "ಸಿದ್ಧರಾಗಿರುವ ನಿಯಮ." ಎಂಬುದಾಗಿ "ಈ ಸಮಯದಲ್ಲಿ ಮಕ್ಕಳು ಹೆಚ್ಚಾಗಿ ಕಲಿಯುವದಕ್ಕೆ ಸಾಧ್ಯವಾದ ನಿಯಮವಾ ಗುತ್ತದೆ." ನಾವು ಸಿದ್ಧರಿಲ್ಲದೆ ಹೋದರೆ ಮಕ್ಕಳು ಕಲಿಯುವದಕ್ಕೆ ಸಾಧ್ಯವಾಗುವದಿಲ್ಲ. ಆ ಒಂದು "ಬೋಧಿಸುವ ಕ್ಷಣದ" ಕುರಿತಾಗಿ ಬ್ರೂಸ್ ನರಮೋರ್ ಹೀಗೆ ಬರೆದಿದ್ದಾರೆ:

> ಕೆಲವು ವರ್ಷಗಳ ಹಿಂದೆ ನಾನು ಮತ್ತು ನನ್ನ ಮಗನು ತೋಟದಲ್ಲಿ ಕೆಲಸಮಾಡುತ್ತಿದ್ದೆವು.
>
> "ದೇವರೆ, ಕಳೆಗಳನ್ನು ಉಂಟು ಮಾಡಿದ್ದಾನೋ?" ಎಂಬ ಡಿಕ್ಕಿಯ ಪ್ರಶ್ನೆಯು ನನ್ನನ್ನು ತಳಮಳಗೊಳಿಸಿತು.
>
> ನಾನು ತಕ್ಷಣ ಉತ್ತರವನ್ನು ನೀಡಿ, ನನ್ನ ಕೆಲಸವನ್ನು ಮುಂದುವರಿಸುವಾಗ, ಈ ಸಮಯದಲ್ಲಿ ಆತ್ಮಿಕ ಪಾಠವನ್ನು ಬೋಧಿಸುವ ಅವಕಾಶವನ್ನು ಮಾಡಿಕೊಂಡೆ.
>
> ಕಳೆ ಕೀಳುವ ಸಾಧನವನ್ನು ಕೆಳಗಿಟ್ಟು, ಡಿಕ್ಕಿ, ನಿನಗೆ ಆದಾಮ ಮತ್ತು ಹವ್ವಳ ಕಥೆ ತಿಳಿದಿದೆಯೇ? ಭೂಮಿಯ ಮೇಲೆ ಪ್ರಥಮವಾಗಿ ಬದುಕಿದ ಜನರು ಅವರಾಗಿದ್ದರು. ದೇವರು ಅವರನ್ನು ಕಳೆಗಳಿಲ್ಲದ ತೋಟದಲ್ಲಿ ಇರಿಸಿದ್ದನು. ಒಂದು ದಿನ ಸೈತಾನನು ಹಾವಿನ ರೂಪದಲ್ಲಿ ಅವರ ಬಳಿಗೆ ಬಂದನು. ದೇವರು ತಿನ್ನಬಾರದೆಂದು ಹೇಳಿದ ಹಣ್ಣನ್ನು ತಿನ್ನುವದಕ್ಕೆ ಹೇಳಿದನು. ನಂತರ ಏನಾಯಿತು ತಳಿದಿದೆಯೇ? ಅವರು ಹಣ್ಣನ್ನು ತಿಂದರು. ನಂತರ ಪ್ರಪಂಚದಲ್ಲಿ ತೊಂದರೆಯು ಪ್ರಾರಂಭವಾಯಿತು. ಆದಾಮ ಹವ್ವಳು ದೇವರಿಗೆ ಅವಿಧೇಯರಾದಾಗ, ಕಳೆಗಳು ಬೆಳೆಯುವದಕ್ಕೆ ಪ್ರಾರಂಭವಾಯತು. ನಂತರ ಅವರು ಸುಂದರವಾದ ತೋಟವನ್ನು ಬಿಟ್ಟು, ಕಷ್ಟಪಟ್ಟು ದುಡಿಯಲು ಹೊರನಡೆದರು.
>
> ಇದು ನಾಚಿಕೆಕರ? ಎಂದು ಡಿಕ್ಕಿಯು ಗಂಭೀರ ಮುಖಭಾವದಿಂದ ಹೇಳಿದನು.[10]

ನಮ್ಮ ಮಕ್ಕಳ ಆಸಕ್ತಿಯನ್ನು ಉತ್ತೇಜಿಸಬಹುದು "ಆದರೆ ಆ ಬೋಧಿಸಿದ ಕ್ಷಣಗಳು ಯಾವಾಗ ದೊರಕುತ್ತದೆ" ಎಂದು ಊಹಿಸಲಾಗದು. ನಮ್ಮ ಮಕ್ಕಳು ಪ್ರಶ್ನೆ ಕೇಳುವ ಸಮಯ, ಅವರು ಆಸಕ್ತಿಯಿಂದ ಕಲಿಯುವ ಸಮಯ, ಈ ಸಮಯಗಳಲ್ಲಿ ತಂದೆ ತಾಯಿಗಳು ಮಕ್ಕಳಿಗೆ *ದೊರಕಬೇಕು.*

ನಮ್ಮ ಮಕ್ಕಳು ಎಳೆವಯಸ್ಸಿನಲ್ಲಿರುವಾಗಲೇ, ಅವರಿಗೆ ಬೋಧಿಸಲು ಪ್ರಾರಂಭಿಸಬೇಕು. ಅದು ಬಹು ಪ್ರಾಮುಖ್ಯ. ಪ್ರಾಣಿ ಮತ್ತು ಪಕ್ಷಿಗಳಲ್ಲಿ ಅಚ್ಚು ಒತ್ತಿರುವ ಒಂದು ಅದ್ಭುತ ಸಂಗತಿಯನ್ನು ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ಪ್ರಾಣಿ ಮತ್ತು ಪಕ್ಷಿಗಳು ಜನನ ಹೊಂದಿದ ತಕ್ಷಣ, ಮೊದಲು ತಮಗೆ ಹತ್ತಿರವಾಗಿ ಚಲಿಸುತ್ತಿರುವ ಸೃಷ್ಟಿಗಳನ್ನು ಅಂಟಿಕೊಳ್ಳುತ್ತವೆ (ಅಥವ "ಹತ್ತಿರವಿರುವ") ಸಾಮಾನ್ಯವಾಗಿ, ಅದು ತಾಯಿಯಾಗಿರುತ್ತದೆ. ಅಥವ ಬೇರೆ ಯಾವುದಾದರೂ ಆಗಿರಬಹುದು. ಮಾನವರ ವಿಷಯದಲ್ಲಿ ಇದು ಇನ್ನೂ ಗಂಭೀರವಾಗಿರುತ್ತದೆ. ಜನಿಸಿದ ತಕ್ಷಣವೇ ಅಚ್ಚು ಒತ್ತುವಂಥ ಕಾರ್ಯ ಪ್ರಾರಂಭವಾ

ಗುತ್ತದೆ;[11] ನಂತರ ಅವಕಾಶ ನಿರಂತರವಾಗಿ ಮಾಯವಾಗುತ್ತದೆ. ಅದೇ ರೀತಿಯಲ್ಲಿ ನಮ್ಮ ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿಯೇ ಬೋಧಿಸದಿದ್ದರೆ, "ನಿರ್ಮಾಣದ ಹಂತದಲ್ಲಿರುವ ವರುಷಗಳನ್ನು" ನಿರಂತರವಾಗಿ ನಾವು ಕಳೆದುಕೊಳ್ಳುತ್ತೇವೆ.

ನಾವು ಬೋಧಿಸಿರುವ ಕೆಲವು ವಿಷಯಗಳನ್ನು ನಮ್ಮ ಮಕ್ಕಳು ನೆನಪು ಮಾಡಿ ಕೊಳ್ಳುತ್ತಾರೆ. ಆದರೆ ನಮ್ಮ ಮನೋಭಾವನೆಗಳನ್ನು ಅವರು ಹೆಚ್ಚು *ನೆನಪಿಟ್ಟುಕೊಳ್ಳುತ್ತಾರೆ.* ಹಿಂದಿನ ಪಾಠಗಳಲ್ಲಿ ನಮೂದಿಸಿರುವ ವಿಷಯಗಳನ್ನು ನಾವು ಬೋಧಿಸಿದರೆ, ಖಂಡಿತ ವಾಗಿ ನಾವು ಯಶಸ್ಸುಗಳಿಸುತ್ತೇವೆ: "ನಾವು ಏನಾಗಿದ್ದವೋ ಅದಕ್ಕಾಗಿ ಮಾಡುತ್ತೇವೆ, ನಾವು ನಂಬಿರುವದರಿಂದ, ನಾವು ಮಾಡಬೇಕಾದ ಕಾರ್ಯಗಳನ್ನು ಮಾಡುತ್ತಿದ್ದೇವೆ."

## ಪ್ರಾಯೋಚಿಸಿರಿ (6:8, 9)

ಇಸ್ರಾಯೇಲ್ ಮಕ್ಕಳಿಗೆ ದೈವಿಕ ಕಟ್ಟಳೆಗಳ ಕುರಿತು ಮೋಶೆಯು ತಿಳಿಸಿದ ನಂತರ, "ಇವುಗಳನ್ನು ಜ್ಞಾಪಕಾರ್ಥವಾಗಿ ಕೈಗೆ ಕಟ್ಟಿಕೊಳ್ಳಬೇಕು; ಇವು ಹಣೆಗೆ ಕಟ್ಟಿಕೊಳ್ಳುವ ಜ್ಞಾಪಕದ ಪಟ್ಟಿಯಂತೆ ಇರಬೇಕು. ನಿಮ್ಮ ಮನೆ ಬಾಗಿಲಿನ ನಿಲುವು ಪಟ್ಟಿಗಳಲ್ಲಿಯೂ, ತಲೆಬಾಗಲುಗಳ ಮೇಲೆಯೂ ಇವುಗಳನ್ನು ಬರೆಯಬೇಕು" (ವಚನಗಳು 8, 9).

"ಧರ್ಮ ಶಾಸ್ತ್ರದ ವಚನಗಳುಳ್ಳ ಒಂದು ಪೆಟ್ಟಿಗೆಯನ್ನು ಯೆಹೂದ್ಯರು ನಿರ್ಮಾಣ ಮಾಡಿದರು."[12] ಇದು ಶುಭ ಸೂಚಕವಾಗಿತ್ತು ಮತ್ತು ಇದನ್ನು ಕೆಲವು ವಿಶೇಷ ಕಾರ್ಯಕ್ರಮಗಳಲ್ಲಿ ಉಪಯೋಗಿಸುತ್ತಿದ್ದರು. ಅದನ್ನು ಕೈಯಿಯ ಮಣಿ ಕಟ್ಟಿಗೆ ಕಟ್ಟುತ್ತಿದ್ದರು. ಮೊಣಕೈ ಬಾಗುವಾಗ, ಆ ಪೆಟ್ಟಿಗೆಯು, ಹೃದಯದ ಸಮೀಪಕ್ಕೆ ಬರುತ್ತಿತ್ತು. ಹಣೆಯ ಮೇಲೆಯು ಪೆಟ್ಟಿಗೆಯನ್ನು ಇಡುತ್ತಿದ್ದರು. ಆ ಪೆಟ್ಟಿಗೆಗೆ ಕಟ್ಟುಹಾಕುತ್ತಿದ್ದರಿಂದ ಅದರಲ್ಲಿ ಇಬ್ರಿಯ ಭಾಷೆಯ ಅಕ್ಷರಗಳು ಮೂಡುತ್ತಿದ್ದವು. ನಂತರ ಅವುಗಳನ್ನು ಬಾಗಿಲಿನ ನಿಲುವು ಪಟ್ಟಿಗಳಿಗೆ ಹಾಕುತ್ತಿದ್ದರು. ಸಂಪ್ರದಾಯ ಯೆಹೂದ್ಯರು ಇದನ್ನು ಈಗಲೂ ಮಾಡುತ್ತಾರೆ. ಧರ್ಮೋಪದೇಶ ಕಾಂಡ 6 ಅಧ್ಯಾಯದ ವಾಕ್ಯವು ಬರೆಯಲ್ಪಟ್ಟ, ಒಂದು ಸಣ್ಣ ಹಾಳೆಯ ಅದರಲ್ಲಿರುತ್ತಿತ್ತು. ಅವುಗಳನ್ನು ಇಬ್ರಿಯ ಭಾಷೆಯಲ್ಲಿ ಬರೆದಿದ್ದರು. ಒಬ್ಬ ಯಥಾರ್ಥ ಯೆಹೂದ್ಯನು ಅದರ ಬಳಿಹೋಗಿ ಇಬ್ರಿಯ ಭಾಷೆಯಲ್ಲಿ ಕೀರ್ತನೆ 121:8ನ್ನು ಪಠನ ಮಾಡುತ್ತಾ ಅದನ್ನು ಸ್ಪರ್ಷಿಸುತ್ತಿದ್ದನು: "ನೀನು ಹೋಗುವಾಗಲೂ, ಬರುವಾಗಲೂ ಇಂದಿನಿಂದ ಸದಾಕಾಲವು ಯೆಹೋವನು ನಿನ್ನನ್ನು ಕಾಪಾಡುವನು."

ದೇವರ ಮನಸ್ಸಿನಲ್ಲಿ ಈ ವಿಷಯವು ಇತ್ತೋ? ಅದರೊಳಗೆ, ಬರೆದಿರುವ ದೇವರ ವಾಕ್ಯದ ಹಾಳೆಯನ್ನು ಇಡುವದರಲ್ಲಿ ಯಾವ ಆಕ್ಷೇಪವಿಲ್ಲ. ನೆನಪು ಮಾಡುವ ವಾಕ್ಯವನ್ನು ನಿಮ್ಮ ಮನೆಯಲ್ಲಿಡುವುದು ತಪ್ಪಾಗುವದಿಲ್ಲ. 3" x 5" ಅಂಗುಲದ ಮುದ್ರಿಸಿರುವ ವಾಕ್ಯವು, ದಿನ ಪೂರ್ತಿ ಸಹಾಯಿಸುತ್ತದೆ, ಎಂದು ಕೆಲವರು ಯೋಚಿಸುತ್ತಾರೆ. ಕೆಲವು ಸ್ತ್ರೀಯರು ಕೈತೊಳೆಯುವ ಸ್ಥಳದಲ್ಲಿಯೂ, ರೆಫ್ರಿಜರೇಟರ್‌ಗಳ ಬಾಗಿಲಿನ ಮೇಲೆಯು "ದಿನನಿತ್ಯದ ಆಲೋಚನೆಯು" ಕುರಿತಾದ ಬರವಣಿಗೆಯನ್ನು ಹಾಕಿ ಕೊಂಡಿರುತ್ತಾರೆ. ಆದರೆ ಧರ್ಮೋಪದೇಶಕಾಂಡದ 6:8, 9ನೇ ವಾಕ್ಯವನ್ನು ಈ ರೀತಿಯಲ್ಲಿ ಪೆಟ್ಟಿಗೆಯಲ್ಲಿ ಇಟ್ಟು ಎಲ್ಲಾ ಕಡೆಗಳಲ್ಲಿ ದೇವಜನರಾದ ಇಸ್ರಾಯೇಲ್ಯರು ಇಡಬೇಕು ಎಂಬ ವಿಷಯವನ್ನು ನಾನು ಸಂದೇಹಿಸುತ್ತೇನೆ. ನಂತರ ಮತ್ತಾಯ 23:5ರಲ್ಲಿರುವ: ಈ ರೀತಿಯಾದ ಕಾರ್ಯವನ್ನು ಯೇಸು ಖಂಡಿಸಿದ್ದಾನೆ [ಪರಿಸಾಯರು] ತಮ್ಮ ಕೆಲಸಗಳನ್ನೆಲ್ಲಾ ಜನರಿಗೆ ಕಾಣಬೇಕೆಂದು ಮಾಡುತ್ತಾರೆ. ತಾವು ಕಟ್ಟಿಕೊಳ್ಳುವ ಜ್ಞಾಪಕ ಪಟ್ಟಿಗಳನ್ನು ಅಗಲ ಮಾಡುತ್ತಾರೆ; ಗೊಂಡೆಗಳನ್ನು ಉದ್ದಮಾಡುತ್ತಾರೆ. "ಅವರು, ನಮ್ಮ ಪೆಟ್ಟಿಗೆಗಳು, ನಿಮ್ಮ ಪೆಟ್ಟಿಗೆಗಳಿಗಿಂಥ ದೊಡ್ಡದಾಗಿದೆ, ನಮ್ಮ ಚರ್ಮದ ಪಟ್ಟಿಗಳು ಅಗಲವಾಗಿವೆ. ಆದುದರಿಂದ ನಿಮಗಿಂತಲೂ ನಾವು ಹೆಚ್ಚು ಧಾರ್ಮಿಕವಾ ಗಿದ್ದೇವೆ ಎಂದು ಹೇಳುತ್ತಿದ್ದರು!"

ವಚನ 8 ಮತ್ತು 9ರಲ್ಲಿ ಚರ್ಚಿಸಲಾಗಿರುವ ಸತ್ಯ ವಾಕ್ಯಗಳು, ನಮ್ಮ ಅಸ್ತಿತ್ವಕ್ಕೆ ನಾಂದಿಯಾಗಬೇಕು? ಎಂದು ದೇವರು ಬಯಸುತ್ತಾನೆ. "ನಾವು ಅವುಗಳನ್ನು ಕೈಗೆ ಕಟ್ಟಿಕೊಳ್ಳಬೇಕು," ಪ್ರತಿಸಲ ನಮ್ಮ ಕೈಗಳು ಕ್ರಿಯೆ ಮಾಡುವಾಗ ಅದು ದೇವರ ಕೆಲಸವನ್ನೇ ಮಾಡುತ್ತದೆ. ಇವು ಹಣೆಗೆ ಕಟ್ಟಿಕೊಳ್ಳುವ ಜ್ಞಾಪಕದ ಪಟ್ಟಿಯಂತೆ ಇರಬೇಕು, ಆಗ ನಮ್ಮ ಆಲೋಚನೆಯು, ದೇವರ ಆಲೋಚನೆಯಂತಿರುತ್ತದೆ. "ನಿಲುವು ಪಟ್ಟಿಗಳಿಗೂ ತಲೆ ಬಾಗಿಲುಗಳ ಮೇಲೆಯೂ ಇವುಗಳನ್ನು ಬರೆಯಬೇಕು," ಇದರ ನಿಮಿತ್ತ ದೇವರ ನಿಯಮಗಳು ನಮ್ಮ ಮನೆಗಳನ್ನು ತುಂಬಿಕೊಂಡಿರುತ್ತದೆ!

ತಂದೆ ತಾಯಿಗಳು ಮಕ್ಕಳನ್ನು ಪೋಷಿಸುವ ಕಾರ್ಯವು ತಂದೆತಾಯಿಗಳ ಉದಾಹರಣೆಯಿಂಲೇ ಪ್ರಾರಂಭವಾಗಿ, ತಂದೆ ತಾಯಿಗಳ ಮಾದರಿಯಿಂದಲೇ ಅಂತ್ಯಗೊಳ್ಳುತ್ತದೆ. "ಕೊಡಲಿಯ ತೂಕದ ಶಕ್ತಿಯಿಂದಲ್ಲೇ ಕಟ್ಟಿಗೆಯು ಕತ್ತರಿಲ್ಪಡುತ್ತದೆ (ತಂದೆ ತಾಯಿಗಳು ಮಕ್ಕಳ ಪೋಷಣೆಯ ಕುರಿತು)."[13] ಬ್ರೂಸ್ ನರಾಮೋರ್ ತನ್ನ ಸಹೋದ್ಯೋಗಿ ತಂದೆ ತಾಯಿಗಳಿಗೆ ಹೇಳಿದ್ದೇನೆಂದರೆ, "ಇತರೆ ಮೂಲಗಳಿಂತಲೂ ತಂದೆ ತಾಯಿಗಳ ಮಾದರಿಯಾದ ಜೀವಿತದಿಂದಲೇ ಮಕ್ಕಳು ಕಲಿಯುವವರಾಗಿರುತ್ತಾರೆ."[14] ಚಾರ್ಲ್ಸ್ ಸ್ವಿಂಡಲ್‌ರವರು ಈ ರೀತಿಯಾಗಿ ಹೇಳಿದ್ದಾರೆ: "ತಂದೆ ತಾಯಿಗಳು ಬೆರಳುಗಳ ಮುದ್ರೆಯು, ಮಕ್ಕಳ ಪೂರ್ಣ ಜೀವಿತ ಕಾಲದಲ್ಲೆಲ್ಲಾ ಅಚ್ಚೊತ್ತಿರುತ್ತದೆ."[15] ಜೀಮ್ಸ್ ಡಾಬ್ಸನ್‌ರವರ ಹೇಳಿಕೆ: "ತಂದೆ ತಾಯಿಗಳು ನಡೆದು ಪೂರ್ತಿ ಮಾಡಿರುವ ಜಾಗವನ್ನೆಲ್ಲಾ ಮಕ್ಕಳ ಹೆಜ್ಜೆಗಳು ಆಕ್ರಮಿಸಿರುತ್ತವೆ."[16]

"ಮಂಗ ನೋಡಿರುವದನ್ನೇ ಮಂಗವು ನಟಿಸುತ್ತದೆ" ಎಂಬ ಹಳೆಯ ನಾಣ್ಣುಡಿಯನ್ನು ನಾವು ಕೇಳಿದ್ದೇವೆ. ಡಾಕ್ಟರ್. ಲೋಗನ್ ರೈಟ್‌ರವರು, ಇದನ್ನು "ಮಂಗನ ನಿಯಮ" ಎಂದು ಕರೆದಿದ್ದಾರೆ. ಅಂದರೆ ಈ ನಿಯಮವು ಮಕ್ಕಳಿಗೂ ಮತ್ತು ಮಂಗಗಳಿಗೂ ಅನ್ವಯಿಸುತ್ತದೆ:

> ... ಒಣ ಹಣ್ಣನ್ನು ಪೆಟ್ಟಿಗೆಯಿಂದ ಹೊರತೆಗೆಯಲು ಮಂಗನಿಗೆ ತರಬೇತಿ ನೀಡಲಾಯಿತು. ಈ ಪಾತ್ಯಕ್ಷತೆಯನ್ನು ಗಮನಿಸುತ್ತಿದ್ದ ಇತರೆ ಮಂಗಗಳಿಗೆ, ಇದೇ ಅವಕಾಶವನ್ನು ನೀಡಲಾಯಿತು. ಬಹಳಷ್ಟು ಮಂಗಗಳು ಪೆಟ್ಟಿಗೆಯನ್ನು ತೆರೆದು ಒಣ ಹಣ್ಣನ್ನು ಹೊರತೆಗೆದವು. ಈ ದೃಷ್ಯವನ್ನು ಗಮನಿಸದೆ ಇದ್ದ ಮಂಗಗಳಿಗೆ ಹೊರತೆಗೆಯುವದು ಕಷ್ಟವಾಯಿತು. ಮಕ್ಕಳಲ್ಲಿಯೂ ಇದೇ ಪರಿಣಾಮಗಳನ್ನು ಗಮನಿಸುತ್ತೇವೆ ... .
>
> ಮಕ್ಕಳ ಅಧ್ಯಯನದ ಕಾರ್ಯದಲ್ಲಿ ಮಕ್ಕಳು ಆಟಿಕೆಗಳೊಂದಿಗೆ ಆಟವಾಡುವಾಗ, ಒಬ್ಬ ದೊಡ್ಡ ಹುಡುಗನು ದೊಡ್ಡ ಬೋಬೋ ಗೊಂಬೆಗೆ ಹೊಡೆದನು. ನಂತರ ಈ ಮಕ್ಕಳು ಆಟವಾಡಲು ಅವಕಾಶ ಪಡೆದಾಗ, ಆಟವಾಡುವದರ ಜೊತೆಗೆ ದೊಡ್ಡ ಹುಡುಗರು ಮಾಡಿದ ಕಾರ್ಯಗಳನ್ನೇ ಮಾಡಿದರು ಅವರು ಅದರ ಮೇಲೆ ಕುಳಿತುಕೊಂಡರು ಅದನ್ನು ಗಾಳಿಯಲ್ಲಿ ತೂರಾಡಿದರು. ದೊಡ್ಡ ಹುಡುಗರು ಮಾಡಿದ ಅಕ್ಷೇಪಗಳನ್ನೇ ಮಾಡಿದರು.[17]

ತಂದೆ ತಾಯಿಗಳಾಗಿ, ಎಲ್ಲಾ ಸಮಯದಲ್ಲಿಯೂ, ಬೋಧಿಸುವವರಾಗಿರುತ್ತೇವೆ. ಹೇಗೆಂದರೆ ಕ್ರಿಯೆಗಳಿಂದಲೂ, ನಮ್ಮ ಜೀವನದ ಮೂಲಕ ಹಾಗೂ ನುಡಿಯಿಂದಲೂ, ನಾವು ಇತರರ ಆಸ್ತಿಯನ್ನು ನಷ್ಟಪಡಿಸಿ, ಅದರ ನಷ್ಟಕ್ಕೆ ಹೊಣೆ ಹೊರದೆ, ಉತ್ತಮ ನಿಯಮದ ಕುರಿತು ಬೋಧನೆಮಾಡುವವರಾಗಿರುತ್ತೇವೆ (ಮತ್ತಾಯ 7:12).[18] ನಾವು ಆದಾಯ ತೆರೆಗೆಯನ್ನು ನೀಡುವದರಲ್ಲಿ, ಮೋಸ ಮಾಡಿರುವ ಕುರಿತ ವಿಷಯದಲ್ಲಿ ಬಡಾಯಿಕೊಚುತ್ತಾ ಅಥವ ಇನ್ನೊಬ್ಬರ ವ್ಯವಹಾರದಲ್ಲಿ ಮೋಸಕರವಾದ ಪ್ರಯೋಜನವನ್ನು ಪಡೆದು - ಯಥಾರ್ಥತೆಯ ಕುರಿತು ಬೋಧಿಸುವವರಾಗಿದ್ದೇವೆ (2 ಕೊರಿಂಥ 8:21). ನಾವು ಆರಾಧನೆಯಲ್ಲಿ ಪಾಲು ತೆಗೆದುಕೊಳ್ಳದೆ, ಅಲಕ್ಷದಿಂದ ಆರಾಧನೆಯಲ್ಲಿ

ಪಾಲುಗಾರರಾಗಿರೆ - ನಾವು ಆರಾಧನೆಗೆ ಸೇರುವದರಿಂದ ಬೋಧಿಸುತ್ತಿದ್ದೇವೆ (ಇಬ್ರಿಯ 10:25). ನಮ್ಮ ಅಧಿಕಾರಿಗಳು ಗಮನಿಸದೆ ಇದ್ದಾಗ, ನಿಯಮಗಳನ್ನು ಮುರಿದು - ನಾವು ನಾಗರೀಕತೆಯ ಕುರಿತು ಬೋಧಿಸುವವರಾಗಿದ್ದೇವೆ (ರೋಮಾಪುರ 13:1).

ನಮ್ಮ ಪ್ರಾಯೋಗಿಕವಾದ ಮಾದರಿಯ ಜೀವಿತದ ಮೂಲಕವಾಗಿ ನಮ್ಮ ಮಕ್ಕಳು ಬಹಳಷ್ಟು ಕಲಿಯುವವರಾಗಿರುತ್ತಾರೆ: ಸಂಘರ್ಷಗಳ ಪರಿಹಾರದ ಕುರಿತು, ನಿರಾಶೆ ಮತ್ತು ಖಿನ್ನತೆಯನ್ನು ಎದುರಿಸುವ ಕುರಿತು, ಕೋಪ ಮತ್ತು ಆಶಾಭಂಗದ ವಿಷಯವನ್ನು ಪರಿಹರಿಸುವ ಕುರಿತು, ಮಾದಕ ವಸ್ತುಗಳ ಸೇವನೆಯಿಲ್ಲದೆ ಜೀವಿತವನ್ನು ಕಾಪಾಡುವ ಕುರಿತು, ಉದ್ವೇಗವನ್ನು ತೋರ್ಪಡಿಸುವ ಕುರಿತು, ತಂದೆ ತಾಯಿಗಳ ಮಾದರಿಯ ಜೀವಿತ ದಿಂದ ಕಲಿಯುವವರಾಗಿರುತ್ತಾರೆ.

"ಮಕ್ಕಳು ಜೀವಿಸುವಂಥದ್ದನ್ನೇ ಕಲಿಯುತ್ತಾರೆ" ಎಂಬಂತೆ ಅದರ ಪುನರಾವರ್ತನೆ ಯೋಗ್ಯವಾದದ್ದೇ:

ಟೀಕೆಯ ಮಧ್ಯದಲ್ಲಿ ಜೀವಿಸುವ ಮಗು ಖಂಡಿಸುತ್ತದೆ.
ವೈರತ್ವದ ನಡುವೆ ಜೀವಿಸುವ ಮಗು
ಜಗಳವಾಡುತ್ತದೆ.
ಮಗು ಭಯದ ಜೊತೆ ಬದುಕಿದ್ದರೆ ಅದು
ಭಯದಲ್ಲೇ ಇರುತ್ತದೆ.
ಅನುಕಂಪದ ನಡುವೆ ಬೆಳೆದ ಮಗು, ತನ್ನ ಮೇಲೆಯೇ
ಅನುಕಂಪ ಪಡುತ್ತದೆ.
ಅಸೂಯೆಯ ನಡುವೆ ಇರುವ ಮಗುವು
ಪಾಪ ಪ್ರಜ್ಞೆ ಹೊಂದಿರುತ್ತದೆ.
ಉತ್ತೇಜನದ ನಡುವೆ ಬೆಳೆದ ಮಗುವು
ಭರವಸದಿಂದ ಇರುತ್ತದೆ.
ಸಹಿಸುವಿಕೆಯ ನಡುವೆ ಬೆಳೆದ ಮಗುವು,
ತಾಳ್ಮೆಯನ್ನು ಕಲಿಯುತ್ತದೆ.
ಸ್ತುತಿಯ ನಡುವೆ ಬೆಳೆದ ಮಗುವು ಒಪ್ಪಿಕೊಳ್ಳುವಂಥ
ಮನಸ್ಸನ್ನು ಹೊಂದಿರುತ್ತದೆ.
ಒಪ್ಪಿಗೆಯ ನಡುವೆ ಬೆಳೆದ ಮಗವು,
ಪ್ರೀತಿಸುವದನ್ನು ಕಲಿಯುತ್ತದೆ.
ಒಪ್ಪಂದದ ನಡುವೆ ಬೆಳೆದ ಮಗುವು, ತನ್ನನ್ನು ತಾನೇ
ಇಷ್ಟಪಡುತ್ತದೆ.
ಅಂಗೀಕಾರದ ನಡುವೆ ಬೆಳೆದ ಮಗುವು,
ಗುರಿ ಹೊಂದುವದನ್ನು ಕಲಿಯುತ್ತದೆ.
ನ್ಯಾಯದ ನಡುವೆ ಬೆಳೆದ ಮಗುವು
ನ್ಯಾಯವನ್ನು ಕಲಿಯುತ್ತದೆ.
ಯಥಾರ್ಥತೆಯ ನಡುವೆ ಜೀವಿಸುವ ಮಗುವು
ಸತ್ಯವನ್ನು ತಿಳಿಯುತ್ತದೆ.
ಸಂರಕ್ಷಣೆಯ ನಡುವೆ ಇರುವ ಮಗುವು,
ತನ್ನಲ್ಲಿ ಮತ್ತು ಇತರರಲ್ಲಿ ನಂಬಿಕೆಯನ್ನು
ಕಲಿಯುತ್ತದೆ.
ಸ್ನೇಹದ ನಡುವೆ ಜೀವಿಸುವ ಮಗುವು, ಪ್ರಪಂಚದ
ಒಂದು ಸುಂದರವಾದ ಸ್ಥಳ ಎಂದು ಗುರಿತಿಸಿ,

ಜೀವಿಸಲು ಯೋಗ್ಯವೆಂದು ತಿಳಿಯುತ್ತದೆ.[19]

ನಮ್ಮ ಪ್ರಭಾವದಿಂದ ಮಕ್ಕಳು ಕಲಿಯುವದು ಮಾತ್ರವಲ್ಲದೆ, ಆ ಪ್ರಭಾವವು ಅವರ ಜೀವಿತ ದಲ್ಲಿ ಮುಂದುವರಿಯುತ್ತದೆ. ಒಳ್ಳೆಯದಕ್ಕಾಗಲಿ ಅಥವ ಕೆಟ್ಟದ್ದಕ್ಕಾಗಲೀ ವಿಮೋಚನಕಾಂಡ 20:4-6ರಲ್ಲಿ ಒಂದು ಪ್ರೋತ್ಸಾಹದ ವಚನವು ಬರೆಯಲ್ಪಟ್ಟಿದೆ: ನಾವು ಯಾವುದೇ ವಿಗ್ರಹವನ್ನು ಮಾಡಬಾರದು, ಆರಾಧಿಸಬಾರದು, ಸೇವಿಸಬಾರದು, ಮತ್ತು ನನ್ನನ್ನು ದ್ವೇಷಿಸುವವರ ವಿಷಯದಲ್ಲಿ ತಂದೆಗಳ ದೂಷಫಲವನ್ನು ಮಕ್ಕಳ ಮೇಲೆ ಮೂರು ನಾಲ್ಕು ತಲೆಗಳವರೆಗೆ ಬರಮಾಡುವೆನು ಎಂದು ದೇವರು ಹೇಳಿದನು (ವಚನ 5). “ಯಾಕೆ ದೇವರು ದೋಷ ಫಲವನ್ನು ಮೂರು ನಾಲ್ಕು ತಲೆಗಳವರೆಗೆ ಬರಮಾಡುವೆನು ಎಂಬುದಾಗಿ ಹೇಳಿದನು?” ಯಾಕೆಂದರೆ ಅಷ್ಟು ದೂರದವರೆಗೆ ತಂದೆತಾಯಿಗಳ ವರ್ಚಸ್ಸು ಬೆಳೆಯುವಂಥದ್ದಾಗಿರುತ್ತದೆ! ಇದನ್ನು “ಸಮಾಜ ಶಾಸ್ತ್ರಜ್ಞರು” ಕಂಡು ಹಿಡಿಯುವದಕ್ಕಿಂದ ಮೊದಲೆ ಈ ವಿಷಯವನ್ನು ಬೈಬಲ್ ತಿಳಿಸಿರುತ್ತದೆ. ಇದರ ಕುರಿತು ಒಂದು ಉದಾಹರಣೆಯನ್ನು ನೋಡೋಣ. ಅನೇಕ ಸಂದರ್ಭಗಳಲ್ಲಿ ತನ್ನ ಜೀವಿತವನ್ನು ರಕ್ಷಿಸಿಕೊಳ್ಳಲು ಅಬ್ರಹಾಮನು ಸುಳ್ಳನ್ನು ಹೇಳುತ್ತಿದ್ದನು (ಆದಿಕಾಂಡ 12:10-13; 20:1-5). ನಂತರ, ಅವನ ಮಗನು ಸಹ ಅದೇ ತರಹದ ಸುಳ್ಳನ್ನು ಹೇಳಿ ದನು (ಆದಿಕಾಂಡ 26:6-11). ಅಬ್ರಹಾಮನ ಮೊಮ್ಮಕ್ಕಳ ಜೀವಿತದಲ್ಲಿ (ಮೂರನೇ ತಲೆ) ಮೋಸಗಾರನೂ - ವಂಚಕನೂ ಎಂಬ ಯಾಕೋಬನನ್ನು ಕಾಣುತ್ತೇವೆ (ಆದಿಕಾಂಡ 27:1-19). ಅವನು ಮುದುಕನಾದಾಗ ಅವನ ಮಕ್ಕಳು ಏನು ಮಾಡಿದರು ಎಂಬುದಾಗಿ ಊಹೆ ಮಾಡಿಕೊಳ್ಳಿರಿ (ನಾಲ್ಕನೆಯ ತಲೆ ಮಾರು) ಅವರು? ತಂದೆಗೆ ಸುಳ್ಳನ್ನು ಹೇಳಿ ಅವನನ್ನು ಮೋಸ ಪಡಿಸಿದರು (ಆದಿಕಾಂಡ 37).[20]

## ಮುಕ್ತಾಯ

ಧರ್ಮೋಪದೇಶ ಕಾಂಡ 6:4-9ರಲ್ಲಿ ನಮ್ಮ ಮಕ್ಕಳು ದೇವರ ಮಾರ್ಗದಲ್ಲಿ ನಡೆಯ ಬೇಕಾಗಿದ್ದರೆ, ನಾವು ನಂಬಬೇಕು, ಬೋಧಿಸಬೇಕು, ಮತ್ತು ಜೀವಿತದಲ್ಲಿ ತೋರಿಸಬೇಕು ಎಂದು ಬರೆಯಲ್ಪಟ್ಟಿದೆ. ತೃಪ್ತಿಕರವಾದ ಜೀವಿತವನ್ನು ತಂದೆ ತಾಯಿಗಳು ಜೀವಿಸ ಬೇಕು ಎಂದು ನಾವು ಒತ್ತಿ ಹೇಳಿದ್ದೇವೆ. ಮತ್ತು ಸತ್ಯವಾದ, ಯೋಗ್ಯವಾದ ಜೀವತವನ್ನು ಜೀವಿಸ ಬೇಕು. ಒಬ್ಬರು ಹೇಳಿರುವಂತೆ “ಮಕ್ಕಳ ನ್ನು ಪೋಷಿಸುವ ವಿಷಯದಲ್ಲಿ ತಂದೆ ತಾಯಿಗಳಲ್ಲಿ ಉಂಟಾಗುವ ಘರ್ಷಣೆಯ ಸಂಭವನೆ ಕುರಿತ ಸಲಹೆಗಳನ್ನು ತಂದೆ ತಾಯಿಗಳ ಮಾದರಿಯ ಎಣ್ಣೆಯು ನಿವಾರ ಮಾಡುವಂಥದ್ದಾಗಿರುತ್ತದೆ.”

ನಮ್ಮ ಮಕ್ಕಳಿಗೆ ನಾವು ಬೋಧಿಸಿರುವ ವಿಷಯಗಳು, ವಕ್ರಬುದ್ಧಿಯುಳ್ಳ ಮೂರ್ಖ ಜಾತಿಯ ಮಧ್ಯದಲ್ಲಿ ದೇವರ “ಬೆಳಕಾಗಿ” ಇರುವರು ನನಗೆ ಒಂದು ಸವಾಲಾಗಿದೆ ಎಂದು ಊಹಿಸುತ್ತೇನೆ (ಫಿಲಿಪ್ಪಿ 2:15). ದೇವರು ಪ್ರತಿ ತಂದೆ ತಾಯಿಗಳ ಜೊತೆಯಲ್ಲಿ ಇರಲಿ![21]

---

ಟಿಪ್ಪಣಿಗಳು

[1]ಫಿಲಿಪ್ಪಿ 4:13 ನೋಡಿರಿ. [2]“ಧರ್ಮೋಪದೇಶಕಾಂಡ”ದ ಅರ್ಥ ಅಕ್ಷರಶಃ “ಎರಡನೆಯ ನಿಯಮ” ಆದರೆ ನಿಯಮಗಳನ್ನು “ಎರಡನೆಯ ಸಾರಿ *ನೀಡಿದ* ಕುರಿತು ಸೂಚಿಸುತ್ತದೆ” - ನಿಯಮದ ಪುನರಾವರ್ತನೆ. [3]ತಂದೆ ತಾಯಿಯ ಜವಾಬ್ದಾರಿಯ ಕುರಿತು ಪಾಠಮಾಡುವಾಗ ಧರ್ಮೋಪದೇಶ ಕಾಂಡ 6 ಮತ್ತು ಜ್ಞಾನೋಕ್ತಿ 22. ಆ ಹಳೇ ಒಡಂಬಡಿಕೆಯ ಭಾಗವ್ನು ನಾನು ಉಪಯೋಗಿಸುತ್ತೇನೆ. ನಂತರ ಎಫೆಸ 6 ಮತ್ತು ಕೊಲೊಸ್ಸೆ 3ರ ಹೊಸ ಒಡಂಬಡಿಕೆಯ ಭಾಗದಿಂದ ಮುಂದುವರಿಸುತ್ತೇನೆ. ಈ ಪುಸ್ತಕದಲ್ಲಿ, ಈ ಎರಡು ಹಿನ್ನೆಲೆಯ, ವಾಕ್ಯಗಳಿಗೆ ಮಾತ್ರ ಸ್ಥಳಾವ ಕಾಶವಿದೆ. [4]ಲಾಭವಾಗುವಂಥ ಚಟುವಟಿಕೆಗಳ ಪಟ್ಟಿಯನ್ನು ಮಾಡುವುದಾದರೆ ಬೈಬಲ್ ಕ್ಯಾಂಪ್, ಕ್ರೈಸ್ತಶಾಲೆ ಮುಂತಾದವುಗಳು. [5]ಅಂಥ ಒಂದು ರಾತ್ರಿಯಲ್ಲಿ ಕೌಟುಂಬಿಕ ಮೌಲ್ಯಗಳನ್ನು ಬರೆದು ಅದನ್ನು ಬಾಯಿಪಾಠ ಮಾಡುವಂತೆ,

ಜೇವ್ಸ್ ಡಾಬಾಸನ್‌ರವರು ಸಹ ನೀಡಿದ್ದಾರೆ. [6]ಅವಶ್ಯವಿದ್ದರೆ, ನೀವು ವಾಸಿಸಿರುವ ಸ್ಥಳದಲ್ಲಿ "ಒಂದು ಕಣ್ಣಿನ ಸಮಯದ ಕಳ್ಳನು" ಅಂದರೆ ದೂರದರ್ಶನದ ಪೆಟ್ಟಿಗೆಯ ಕುರಿತು, ಅದರ ಮುಂದೆ ನೋಡುತ್ತಾ ಊಟ ಮಾಡುವದಾದರೆ, ಬೋಧನೆಯ ಸಮಯವನ್ನು ಭಾಷ ಸಂಪರ್ಕದ ಸಮಯವನ್ನು ಕಳಕೊಳ್ಳುವವರಾಗಿರುತ್ತೇವೆ. [7]ಸುವಾರ್ತಾ ಹಾಡುಗಳನ್ನು ಹಾಡುವ ಸಮಯ ನಮ್ಮ ಕುಟುಂಬದ ಪ್ರಾಮುಖ್ಯ ಸಮಯವಾಗಿತ್ತು. [8]ನನ್ನ ಪುಟ್ಟ ಮಗಳ ಜೊತೆಯಲ್ಲಿ ನಡೆದಾಡುತ್ತಿದ್ದ ಸಮಯದ ನೆನಪು ನನಗೆ ನೆನಪಿಗೆ ಬರುತ್ತದೆ. ಆಕೆಯನ್ನು ಮಲಗಿಸುತ್ತಿದ್ದ ಸಮಯದ ನೆನಪು ಉಂಟಾಗುತ್ತದೆ. ಅವಳಿಗೆ ಬೇಗ ನಿದ್ರೆ ಬಾರದೆ ಇದದ್ದರಿಂದ ಆ ಸಮಯ ವಿಷಯಗಳನ್ನು ತಿಳಿಸುವ ಸಮಯವಾಗಿತ್ತು. [9]Quoted by Harold Hazelip in *Happiness in the Home* (Grand Rapids, Mich.: Baker Book House, 1985), 35. ಸೃಷ್ಟಿಯ ಉದಾಹರಣೆಯ ಮೂಲಕ ದೇವರ ಕುರಿತು ಮಾತನಾಡಬಹುದು (ಕೀರ್ತನೆ 19:1, 2; ಜ್ಞಾನೋಕ್ತಿ 6:6; 30:18, 19; 26-28; ಮತ್ತಾಯ 6:19, 20, 26, 28, 30; 7:6, 16-20; 10:29; 13:1-9, 24-30; ಲೂಕ 15:3-7). "ಯಾರು ಮಾಡಿದರು?" ಎಂದು ಸ್ವಾಭಾವಿಕವಾಗಿ ಮಕ್ಕಳು ಪ್ರಶ್ನಿಸುತ್ತಾರೆ. [10]Bruce Narramore, *Parenting With Love & Limits* (Grand Rapids, Mich.: Zondervan Publishing House, 1979), 64.

[11]"ಅಚ್ಚು ಒತ್ತುವ" ನಿಯಮದ ಕುರಿತಾಗಿ ವಿಜ್ಞಾನಿಗಳು ಪ್ರಭಾವಹೊಂದಿದ್ದಾರೆ. ಮಕ್ಕಳು ಹುಟ್ಟಿದ ತಕ್ಷಣ, ವೈದ್ಯರುಗಳ ಮಕ್ಕಳನ್ನು ಅವರ ತಾಯಿಯ ಮಡಿಲಿನಲ್ಲಿ ಹಾಕುತ್ತಾರೆ. ಇದನ್ನು "ಬಂಧನ" ಎಂಬುದಾಗಿ ಕರೆಯುತ್ತೇವೆ. [12]ಗ್ರೀಕ್ ಭಾಷೆಯ "ಕಾವಲುಗಾರನ್ನು" ಎಂಬ ಪದಕ್ಕೆ ಧರ್ಮಶಾಸ್ತ್ರ ವಚನಗಳುಳ್ಳ ಚರ್ಮದ ಚೀಲ ಎಂದು ಕರೆಯುತ್ತಾರೆ. ದೇವರು ತನ್ನ ಬಲವಾದ ಹಸ್ತದಿಂದ ಇಸ್ರಾಯೇಲ್ಯರನ್ನು ಐಗುಪ್ತದಿಂದ ಹೊರತಂದನು ಎಂಬ ಸೂಚನೆಯು ಅವರ ಹಣೆಯ ಮೇಲೆ ಇರಬೇಕಿತ್ತು. ಅವರ ನಂಬಿಕೆಯು, ಈ ಸತ್ಯದ ಮೇಲೆ ಅವಲಂಬಿಸಿತ್ತು. ಮತ್ತು ಅವರನ್ನು "ಕಾಪಾಡಿ ಮುನ್ನಡೆಸುತ್ತಿತ್ತು" (ವಿಮೋಚನಕಾಂಡ 13:16). ಅವರು ಅ ಪೆಟ್ಟಿಗೆಯನ್ನು ಕೈಗೆ ಕಟ್ಟಿಕೊಳ್ಳುವ ವಿಷಯಕ್ಕೆ ಸಂಬಂಧಿಸಿರಲಿಲ್ಲ. [13]ಉದಾಹರಣೆಯ ಮೂಲಕ ಪೌಲನು, ಬೋಧನೆಯ ನೇಮಗಳನ್ನು ತಿಳಿಸಿದ್ದಾನೆ (ಫಿಲಿಪ್ಪಿ 4:9). [14]Bruce Narramore, *Help! I'm a Parent* (Grand Rapids, Mich.: Zondervan Publishing House, 1972), 60. [15]Charles Swindoll, *You and Your Child* (New York: Thomas Nelson Publishers, 1977), 87. [16]Quoted in James Dobson, *The Strong-Willed Child* (Wheaton, Ill.: Tyndale House Publishers, 1978), 56. [17]Logan Wright, *Parent Power: A Guide to Responsible Childrearing* (New York: Psychological Dimensions, 1978), 32. [18]ಬೇಡವಾದ ಪಾಠ ಕೆಟ್ಟ ಉದಾಹರಣೆಯನ್ನು ಈ ಪಾಠದಲ್ಲಿ ತಿಳಿಸಲಾಗಿದೆ ಅವಶ್ಯವಿದ್ದರೆ ಇದನ್ನು ಸರಳೀಕರಿಸಿರಿ. [19]Author unknown. Quoted by Carl Brecheen and Paul Faulkner. *What Every Family Needs or Whatever Happened to Mom, Dad, & the Kids?* (Austin, Tex.: Sweet Publishing Co., 1979), 147. [20]ಯೆರೋಭಾಮನ ಕುರಿತ ಇನ್ನೊಂದು ನಕಾರಾತ್ಮಕವಾದ ಉದಾಹರಣೆ ಇಸ್ರಾಯೇಲ್ಯರ ಅರಸರ ಪೂರ್ವಕಾಲವೃತ್ತಾಂತದಲ್ಲಿ, "ಅವರು ಯೆರೋಬ್ಬಾಮನ ಪಾಪದಲ್ಲಿ ನಡೆದರು. ಎಂಬುದಾಗಿ ಇಪ್ಪತ್ತೊಂದು ಸಾರಿ ಓದುತ್ತೇವೆ."

[21]ಇದನ್ನು ಪ್ರಸಂಗದಲ್ಲಿ ಉಪಯೋಗಿಸುವದಾದರೆ ಕುಟುಂಬ ಮತ್ತು ಮದುವೆಯ ಕುರಿತು ನಾನು ಮಾತನಾಡುವಾಗ, ಈ ರೀತಿಯಾದ ಆಹ್ವಾನವನ್ನು ನಾನು ನೀಡುತ್ತೇನೆ. ಇದು ಕ್ರೈಸ್ತರ ಕುಟುಂಬವಾಗಿ ಇರಬೇಕು. ಅದರ ಅರ್ಥ ಕುಟುಂಬದ ಪ್ರತಿಯೊಬ್ಬರು ನಂಬಿಗಸ್ತರಾದ ಕ್ರೈಸ್ತರಾಗಿರಬೇಕು, ನಂತರ ಯಾವ ರೀತಿ ಕ್ರೈಸ್ತರಾಗಿರಬೇಕೆಂದು ನಾನು ಹೇಳುತ್ತೇನೆ, ಮತ್ತು ಹೇಗೆ ಪುನಃ ಸ್ಥಾಪನೆಗೊಳ್ಳಬೇಕು ಎಂದು ತಿಳಿಸುತ್ತೇನೆ, ಪ್ರತಿಕ್ರಿಯಿಸಲು ಭಿನ್ನವಿಸುತ್ತೇನೆ.